**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ10-12-2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಹೆಚ್ ಕೆ ವಕೀಲರಿಂದ**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಚಾಲಕ ಕೆಲಸವನ್ನು 30 ವರ್ಷದಿಂದ ಮಾಡುತ್ತಿದ್ದೇನೆ. ನನ್ನ ಮನೆ 30*40 ಅಡಿ ಇರುತ್ತದೆ. ಅದರ ಚೆಕ್ಕುಬಂದಿ ಪೂಃ ಖಾಸಗಿ ರವರ ನಿವೇಶನ, ಪಃ ಪುರಸಭೆ ರಸ್ತೆ, ದಃ ಪೌರಕಾರ್ಮಿಕರ ಶೆಡ್ ಮತ್ತು ಉಃ ರಾಜುರವರ ಮನೆ ಇರುತ್ತದೆ. ನಾನು ಸದರಿ ಮನೆಯಲ್ಲಿ 2018 ರಿಂದ ವಾಸವಿರುತ್ತೇನೆ. ನನ್ನ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ಸದರಿ ನಿವೇಶವನ್ನು ಜಬ್ಬರ್ ಖಾನ್ ರವರಿಂದ ಖರೀದಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ಅವಶ್ಯಕತೆ ಇಲ್ಲದ ಕಾರಣ ಹಾಜರುಪಡಿಸಿಲ್ಲ. ಅದರ ಕ್ರಯಪತ್ರ ನನ್ನ ಬಳಿ ಇರುತ್ತದೆ. ಕ್ರಯ ಪತ್ರದಲ್ಲಿರುವ ಚೆಕ್ಕುಬಂದಿ ಮತ್ತು ಮೇಲೆ ತಿಳಿಸಿದ ಚೆಕ್ಕುಬಂದಿ ಒಂದೇ ಆಗಿರುತ್ತದೆ. ನಾನು 2018 ರಲ್ಲಿ ಮನೆ ಕಟ್ಟಿರುತ್ತೇನೆ.

ನಮ್ಮ ಜಾಗ ಪುರಸಭೆ ವ್ಯಾಪ್ತಿಗೆ ಸೇರಿದ್ದು ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿದ ನಿವೇಶನ ಜಬ್ಬರ್ ಖಾನ್ ರವರಿಗೆ ರಹೀಮ್ ಖಾನ್ ರವರಿಂದ ಬಂದಿರುತ್ತದೆ. ಯುಸಫ್ ಎಂಬುವವರು ನಾನು ಖರೀದಿ ಮಾಡಿದ ಜಾಗವನ್ನು ಸೇರಿಸಿ ನ್ಯಾಯಾಲಯದಲ್ಲಿ ನಿರ್ಬಂಧ ಆಜ್ಞೆ ಆದೇಶ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಮನೆಯ ಯಾವ ದಿಕ್ಕಿಗೂ ಯುಸಫ್ ರವರ ಜಾಗ ಇರುವುದಿಲ್ಲ. ನಮ್ಮ ಮನೆಗೆ ಯಾವುದೇ ಮೂಲ ದಾಖಲಾತಿಗಳು ಇಲ್ಲದೇ ಇದ್ದರೂ ಅಕ್ರಮವಾಗಿ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಹಿ/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**